**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:– 112/2023**

| | | |
|---|---|---|
| **ಸಾಕ್ಷಿದಾರನ ಹೆಸರು** | : ಶೇಖ್ ಜಮೀಲ್ ಪಾಷ | **ಪಿ.ಡಬ್ಲ್ಯೂ:– 5** |
| **ತಂದೆಯ ಹೆಸರು** | : ಶೇಖ್ ಚಾಂದ್ ಪಾಷ | **ಸಿ.ಡಬ್ಲ್ಯೂ:– 3** |
| **ವಯಸ್ಸು** | : 35 ವರ್ಷ | |
| **ಉದ್ಯೋಗ** | : ಟೈರ್ ವ್ಯಾಪಾರ | |
| **ವಾಸಸ್ಥಳ** | : ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:02.04.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

1. ಚಾ.ಸಾ:1 ರವರ ಪರಿಚಯ ಇರುತ್ತದೆ. ಚಾ.ಸಾ:2 ರವರ ಪರಿಚಯ ಇರುವುದಿಲ್ಲ. ಆರೋಪಿಯ ಪರಿಚಯ ಇರುವುದಿಲ್ಲ.

2. ಸುಮಾರು 10 ವರ್ಷಗಳ ಹಿಂದೆ ಒಂದು ದಿನ ರಾತ್ರಿ 7.30 ರಿಂದ 8 ಗಂಟೆ ಸಮಯದಲ್ಲಿ ನಾನು ರಾಜೀವ್ ನಗರದಿಂದ ಶಾಂತಿನಗರದ ಕಡೆಗೆ ನನ್ನ ದ್ವಿಚಕ್ರ ವಾಹನದಲ್ಲಿ ಅಲ್ ಖರೀಮ್ ಶಾಲೆ ಬಳಿ ಹೋಗುತ್ತಿರುವಾಗ, ನನ್ನ ಸ್ನೇಹಿತ ಇರ್ಫಾನ್ ರವರ ತಮ್ಮ ಚಾ.ಸಾ:1 ನನ್ನ ಎದುರುಗಡೆಯಿಂದ ರಕ್ತ ಬರುತ್ತಿದೆ ಎಂದು ಯಾರೋ ಆತನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಓಡಿಕೊಂಡು ಬರುತ್ತಿದ್ದನು. ನಾನು ಆತನನ್ನು ನನ್ನ ವಾಹನದಲ್ಲಿ ಕೂರಿಸಿಕೊಂಡು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆತನಿಗೆ ಚಿಕಿತ್ಸೆ ಕೊಡಿಸಿ ನಾನು ವಾಪಸ್ಸು ಮನೆಗೆ ಹೋಗಿರುತ್ತೇನೆ. ನಾನು

ಘಟನೆಯನ್ನು ನೋಡಿರುವುದಿಲ್ಲ. ಆತನಿಗೆ ಯಾರು? ಯಾವುದರಿಂದ ಹಲ್ಲೆ ಮಾಡಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

3. ದಿಃ-20.12.2014 ರಂದು ನಾನು ಅಲ್ ಖರೀಮ್ ಶಾಲೆ ಬಳಿ ಬರುತ್ತಿದ್ದಾಗ ಚಾ.ಸಾಃ1 ಮತ್ತು 2 ರವರು ನಡೆದುಕೊಂಡು ಬರುತ್ತಿದ್ದರು. ಆಗ ಎದುರುಗಡೆಯಿಂದ ವಸೀಮ್ ಖಾನ್ ಮತ್ತು ಇನ್ನಿಬ್ಬರು ಬಂದು ವಸೀಮ್ ಖಾನ್ ಚಾ.ಸಾಃ1 ರವರನ್ನು ಏನೋ ರೋಲ್ ಕಾಲ್ ಕೇಳಿದರೆ ಇಲ್ಲ ಎನ್ನುತ್ತೀಯಾ ಎಂದು , ಅದರಲ್ಲಿ ವಸೀಮ್ ಅವಾಚ್ಯ ಶಬ್ದಗಳಿಂದ ಬೈದು, ಚಾ.ಸಾಃ1 ರವರಿಗೆ ತಲೆಯ ಮೇಲೆ ಕಲ್ಲು ಎತ್ತಿ ಹಾಕುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದನು. ಆ ಸಮಯದಲ್ಲಿ ಇಬ್ಬರು ಅಸಾಮಿಗಳು ಚಾ.ಸಾಃ1 ರವರನ್ನು ತಬ್ಬಿ ಹಿಡಿದುಕೊಂಡಿದ್ದು, ವಸೀಮ್ ತನ್ನ ಜೇಬಿನಿಂದ ಬ್ಲೇಡ್ ತೆಗೆದು ಚಾ.ಸಾಃ1 ರವರ ಕೊಲೆ ಮಾಡುವ ಉದ್ದೇಶದಿಂದ ಆತನ ಕತ್ತಿಗೆ ಹೊಡೆಯಲು ಹೋದಾಗ, ಆತ ತಪ್ಪಿಸಿಕೊಂಡಿದ್ದು, ಬ್ಲೇಡಿನ ಏಟು ಆತನ ಎಡಗೆನ್ನೆ ಮತ್ತು ಮೇಲ್ ತುಟಿಗೆ ಬಿದ್ದು ಕುಯ್ದಿರುತ್ತದೆ, ವಸೀಮ್ ನ ಜೊತೆ ಇದ್ದ ಇನ್ನು ಇಬ್ಬರು ಒಬ್ಬ ದಾದಾಪೀರ್ ಮತ್ತು ಇನ್ನೊಬ್ಬ ಮೊಹೀನ್ ಎಂದು ನನಗೆ ಹೆಸರು ತಿಳಿದು ಬಂದಿರುತ್ತದೆ, ಅಷ್ಟರಲ್ಲಿ ನಾನು ಮತ್ತು ಅಬ್ದುಲ್ ನಬೀಲ್ ಹೊಡೆಯುವುದನ್ನು ಬಿಡಿಸಿದೆವು ಎಂದರೆ ಸರಿಯಲ್ಲ.

**4.** ಇದೇ ರೀತಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಶಾನೆ ಪಿ–8 ಎಂದು ಗುರುತಿಸಲಾಯಿತು.

**5.** ನ್ಯಾಯಾಲಯದ ಮುಂದೆ ಆರೋಪಿಯು ಚಾ.ಸಾಃ1 ರವರನು ತಬ್ಬಿ ಹಿಡಿದ ಅಸಾಮಿಯಾದ ದಾದಾಪೀರ್ ಆಗಿರುತ್ತಾನೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**6.** ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಅದರ ಬಗ್ಗೆ ತಿಳಿದಿದ್ದು, ಆರೋಪಿಯನ್ನು ಗುರುತಿಸಿದ್ದರೂ ಸಹ, ಈಗ ನ್ಯಾಯಾಲಯದ ಮುಂದಿರುವ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**